## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ.

ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.


# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ಸರ್ವಧಾರಿ ಸಂ|| ಜ್ಯೇಷ್ಠ ಮಾಸ — ಸಂಪುಟ - ೨೩

ಜೂನ್ ೨೦೦೮ — ಸಂಚಿಕೆ - ೦೬


# ಸ್ನೇಹ

ಪ್ರತಿಯೊಂದು ಜೀವಿಯೂ ಸ್ನೇಹವನ್ನು ಬಯಸುತ್ತದೆ. ಪ್ರಾಣಿಗಳು, ಪಕ್ಷಿಗಳು, ಮಾನವರು ಎಲ್ಲರೂ ಸ್ನೇಹ ಜೀವಿಗಳೇ. ಪರಿಪೂರ್ಣತೆಯಿಂದ ಕೂಡಿದ ಸಮುದ್ರವೂ ಸಹ ಚಂದ್ರನ ಸ್ನೇಹವನ್ನು ಬಯಸುತ್ತದೆಯಂತೆ.

ಇಂತಹ ಸ್ನೇಹಕ್ಕೆ ಆರು ಭಾವನೆಗಳಿವೆ. ಕೊಡುವುದು, ತೆಗೆದುಕೊಳ್ಳುವುದು, ಗುಟ್ಟನ್ನು ಹೇಳುವುದು, ಕೇಳುವುದು, ತಿನ್ನುವುದು ಹಾಗೂ ತಿನ್ನಿಸುವುದು.

ವಿಷ್ಣುಶರ್ಮ ವಿರಚಿತ ಪಂಚತಂತ್ರದಲ್ಲಿ ಎರಡನೇ ತಂತ್ರ 'ಮಿತ್ರಲಾಭ'ದಲ್ಲಿ ಹಿರಣ್ಯಕ (ಇಲಿ) ಲಘುಪತನಕ (ಕಾಗೆ)ನಿಗೆ ಪ್ರಾಣ ಹೋದರೆ ಹೋಗಲಿ, ಮತ್ತೆ ಮುಂದಿನ ಜನ್ಮ ಪಡೆಯಬಹುದು. ಆದರೆ ನಿನ್ನಂತಹ ಸ್ನೇಹಿತನನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ ಎಂದು ಹೇಳುತ್ತಾ ಸ್ನೇಹದ ಬೆಲೆಯನ್ನು ಮತ್ತಷ್ಟು ಹೆಚ್ಚಿಸಿದ್ದಾನೆ.

ಭರ್ತೃಹರಿಯೆಂಬ ಕವಿಯು ''ಉತ್ತಮರ ಸ್ನೇಹವು ಬೆಳಗಿನ ಅರ್ಧ ದಿನ ನೆರಳು ಹೇಗೆ ಹೆಚ್ಚಾಗುವುದೋ ಹಾಗೆ ವೃದ್ಧಿಯಾಗುತ್ತಾ ಹೋಗುತ್ತದೆ. ಅದೇ ಅಧಮರ ಅಥವಾ ಕೆಟ್ಟವರ ಸ್ನೇಹವು ಮಧ್ಯಾಹ್ನದ ನೆರಳು ಕಡಿಮೆಯಾಗುತ್ತಾ ಹೋಗುವಂತೆ'' ಎಂದು ಹೋಲಿಕೆಯನ್ನು ಕೊಟ್ಟಿದ್ದಾನೆ.

ಶ್ರೀಕೃಷ್ಣ – ಕುಚೇಲರ ಸ್ನೇಹವನ್ನು ಜನರು ಇಂದಿಗೂ ಉದಾಹರಣೆಯಾಗಿ ಕೊಡುತ್ತಾರೆ. ಕೃಷ್ಣಾರ್ಜುನರ ಸ್ನೇಹ ಲೋಕಮಾನ್ಯವಾದುದು.

ಸಂತಪ್ತಾ ಯಸಿ ಸುಸ್ಥಿತಸ್ಯ ಪಯಸೋ ನಾಮಾಪಿ ನಶ್ರೂಯತೇ
ಮುಕ್ತಾಕಾರತಯಾ ತದೇವ ನಲನೀಪತ್ರಸ್ಥಿತಂ ರಾಜತೇ।
ಸ್ವಾತ್ಯಾಂ ಸಾಗರ ಶುಕ್ತಿಮಧ್ಯಪತಿತಂ ಸಸ್ಯಾಕ್ತಿತಂ ಜಾಯತೇ।
ಪ್ರಾಯೇಣಾಧಮಮಧ್ಯಮೋತ್ತ ಮಗುಣಃ ಸಂಸರ್ಗತೋ ಜಾಯತೇ॥

ಕಾದ ಕಬ್ಬಿಣದ ಮೇಲೆ ಬಿದ್ದ ನೀರು ಹೇಳ ಹೆಸರಿಲ್ಲದಂತೆ ಆರಿ ಹೋಗುತ್ತದೆ. ಅದೇ ನೀರು ತಾವರೆಯ ಎಲೆಯ ಮೇಲೆ ಮುತ್ತಿನ ರೂಪದಲ್ಲಿ ಕಾಣುತ್ತದೆ. ಅದೇ ನೀರು ಸ್ವಾತಿ ನಕ್ಷತ್ರದ ಯೋಗವಾದಾಗ ಸಮುದ್ರದೊಳಗಿನ ಕಪ್ಪೆ ಚಿಪ್ಪಿನಲ್ಲಿ ಬಿದ್ದಾಗ ಉತ್ತಮ ಮುತ್ತಾಗಿ ಬಿಡುತ್ತದೆ. ಸಾಮಾನ್ಯವಾಗಿ ಕೆಳಮಟ್ಟದ, ಮಧ್ಯಮ ತರಗತಿಯ ಮತ್ತು ಉತ್ತಮ ಗುಣವು ಸಹವಾಸದಿಂದಲೇ ಉದ್ಭವಿಸುತ್ತದೆ.

ಆದ್ದರಿಂದ ಸ್ನೇಹವನ್ನು ಮಾಡುವಾಗ ಸಜ್ಜನರಲ್ಲಿ ಮಾಡಿಕೊಳ್ಳಬೇಕು. ಇದನ್ನು ಸರ್ವಜ್ಞ ಹೀಗೆ ಹೇಳಿದ್ದಾನೆ.

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗವದು ಬಚ್ಚಲಾ ರೊಚ್ಚಿನಂತೆ ಸರ್ವಜ್ಞ

ಹೀಗಿದೆ ಸ್ನೇಹದ ಪರಿ. ಇಂತಹ ಸ್ನೇಹಭಾವವನ್ನು ಭಗವಂತನೊಂದಿಗೆ ಬೆಳೆಸಿದಾಗ ಭಗವಂತನ ಸಾನ್ನಿಧ್ಯ ಕಟ್ಟಿಟ್ಟ ಬುತ್ತಿ.

– ಸಂಗ್ರಹ

## ರಥೋತ್ಸವ

ಕಡೂರು ತಾಲ್ಲೂಕು ಮುಗಳೀಕಟ್ಟೆ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಬ್ರಹ್ಮ ರಥೋತ್ಸವವು 14ನೇ ಜುಲೈ ಸೋಮವಾರದಂದು ಜರುಗಲಿದೆ. ಇದಕ್ಕೆ ಪೂರ್ವಭಾವಿಯಾಗಿ ಅಂದರೆ 13ನೇ ತಾರೀಖು ಸಂಜೆ ಕಲ್ಯಾಣೋತ್ಸವವೂ ನಡೆಯಲಿದೆ. ಭಕ್ತಾದಿಗಳು ಈ ಸೇವೆಗಳಲ್ಲಿ ಭಾಗವಹಿಸಿ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಈ ಮೂಲಕ ಕೋರಿದೆ.

ಬರುವ ಭಕ್ತಾದಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಲಾಗುವುದು.

ಇಂತಿ ವಿಶ್ವಸ್ಥ ಮಂಡಲಿ
ಮುಗಳೀಕಟ್ಟೆ







## ಅಧ್ಯಕ್ಷನುಡಿ

ಸುವಿಖ್ಯಾತ ರುದ್ರಪಟ್ಟಣ ಸಂಗೀತ ಮಹೋತ್ಸವದ 7ನೇ ವರ್ಷದ ಸಂಭ್ರಮ ಈಗಷ್ಟೇ ಮುಗಿದಿದೆ. ಸಪ್ತಸ್ವರ ದೇವತಾ ಧ್ಯಾನಮಂದಿರದ ಉದ್ಘಾಟನೆ ಉತ್ಸವದ ಉಳಿದ ಮಹತ್ವದ ಜನಪ್ರಿಯ ಕಾರ್ಯಕ್ರಮಗಳಿಗೆ ಶೃಂಗಪ್ರಾಯವಾಗಿ ರಸಿಕರ ಮನಸೆಳೆದಿದೆ. ಎಲ್ಲಾ ವ್ಯವಸ್ಥೆಗಳೂ ಅಚ್ಚುಕಟ್ಟಾಗಿದ್ದು ಸಹಸ್ರಾರು ಸಂಗೀತಾಭಿಮಾನಿಗಳಿಗೆ ಅವಿಸ್ಮರಣೀಯವೆನಿಸಿದೆ.

ನಮ್ಮ ವೃದ್ಧಾಶ್ರಮದ ನಿರ್ಮಾಣದಲ್ಲಿ ಮುಖ್ಯ ಘಟ್ಟವೊಂದನ್ನು ದಾಟಿದ್ದೇವೆ. **ಕಟ್ಟಡದ ನಕ್ಷೆಗೆ ಮಂಜೂರಾತಿ ಸಿಕ್ಕಿದೆ. ನಿರ್ಮಾಣದ ಕಾರ್ಯಕ್ಕೆ ಇಂಬು ದೊರೆತಿದೆ.** ನಿಮ್ಮೆಲ್ಲರಿಂದ ನಿರಂತರ ನೆರವಿನ ನಿರೀಕ್ಷೆ ನಮ್ಮದು. ವೃದ್ಧಾಶ್ರಮದ ಕಾರ್ಯವೈಖರಿ, ರೀತಿ-ರಿವಾಜುಗಳ ಸ್ಪಷ್ಟ ಚಿತ್ರಣ ಸಿಗಬೇಕಾಗಿದೆ. **ಜತೆಯಲ್ಲಿಯೇ ಸಮರ್ಥ ಮೇಲ್ವಿಚಾರಕರ ನೇಮಕಾತಿಯೂ ಆಗಬೇಕಾಗಿದೆ.** ಮಾನ್ಯ ಬಾಂಧವರೆಲ್ಲ ಹೆಚ್ಚು ಆಸಕ್ತಿ ತೋರಬೇಕಾಗಿ ಕೋರುತ್ತೇನೆ.

ವಿದ್ಯಾಪಕ್ಷಪಾತಿಗಳಾದ ಸಂಕೇತಿ ಬಾಂಧವರು ಈ ಬಾರಿಯ ಪರೀಕ್ಷೆಗಳಲ್ಲಿಯೂ ಉತ್ತಮ ಸಾಧನೆ ಮೆರೆದಿದ್ದಾರೆ. ಅವರಲ್ಲಿ **ಚಿ|| ಅನಿಲ್ ನಾರಾಯಣ್** (ಶ್ರೀಮತಿ ಗಾಯತ್ರಿ ಮತ್ತು ಡಾ|| ಎಸ್.ಡಿ. ಸುಬ್ಬರಾವ್ ಅವರ ಸುಪುತ್ರ) ಎರಡನೇ ಪಿ.ಯು.ಸಿ. ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯನ್ನು ಪಡೆದು ಸಿ.ಇ.ಟಿಯ **ಮೆಡಿಕಲ್ ಪ್ರವೇಶ ಪರೀಕ್ಷೆಯಲ್ಲಿ 47ನೇ ರ್‍ಯಾಂಕ್** ಪಡೆದಿರುವುದು ನಮಗೆಲ್ಲಾ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಚಿ|| ಅನಿಲ್ ಸಂಘದ ಮಾಜಿ ಅಧ್ಯಕರಾಗಿದ್ದ ದಿ|| ಡಾ|| ಎಸ್. ಧ್ರುವನಾರಾಯಣ್ ಅವರ ಮೊಮ್ಮಗ ಎಂಬುದನ್ನು ಇಲ್ಲಿ

ಉಲ್ಲೇಖಿಸಬಹುದು. ಇವನು ಮೂರನೇ ಪೀಳಿಗೆಯ ವೈದ್ಯನಾಗುವವನಿದ್ದಾನೆ. ಚಿ|| ಅನಿಲ್‌ಗೆ ಹಾರ್ದಿಕ ಅಭಿನಂದನೆಗಳು.

ನಮ್ಮ ಬಾಂಧವರ ಉದಾರ ಹಸ್ತಗಳನ್ನು ಆಗಾಗ್ಗೆ ನಾವು ಉಲ್ಲೇಖಿಸುತ್ತಲೇ ಬಂದಿದ್ದೇವೆ. ಶ್ರೀಯುತ ಆರ್. ಕೆ. ರಾಮಸ್ವಾಮಯ್ಯ (ಮೊಮ್ಮಗನ ಉಪನಯನ) ಮತ್ತು ಶ್ರೀಯುತ ಹೆಚ್. ವಿ. ಮಲ್ಲಿಕಾರ್ಜುನ (ಮಗನ ಮದುವೆ) ಅವರುಗಳು 1,000 ರೂ. ಸಭಾ ತಾಂಬೂಲವನ್ನು ನೀಡಿ ಸಂಘದ ಮೇಲಿನ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ.

ಸಂಘದ ಸಾಲರೂಪದ ವಿದ್ಯಾರ್ಥಿವೇತನದ ಉಪಯೋಗ ಪಡೆದುಕೊಂಡು, ಇಂಜಿನೀಯರ್ ಆಗಿ, ಕೆಲಸದಲ್ಲಿ ನಿಪುಣ ಎನಿಸಿಕೊಂಡು ವಿದೇಶಕ್ಕೆ ತೆರಳಿ, ವಿದ್ಯಾರ್ಥಿ ವೇತನದ ಅಷ್ಟೂ ಹಣವನ್ನು ಒಂದೇ ಕಂತಿನಲ್ಲಿ ಹಿಂತಿರುಗಿಸಿ ಶ್ಲಾಘನೆಗೆ ಪಾತ್ರನಾಗಿರುವವನು **ಚಿ|| ಸುಮುಖ** (ಶ್ರೀಮತಿ ವತ್ಸಲಾ ಮತ್ತು ಶ್ರೀ ಎಸ್.ಎನ್. ರಘುನಾಥ್ ಅವರ ಮಗ ಹಾಗೂ ದಿ|| ಎಸ್. ಕೆ. ನಾರಾಯಣ ರಾವ್, (ಸಂಘದ ಮಾಜಿ ಕಾರ್ಯದರ್ಶಿಗಳು) ಇವರ ಮೊಮ್ಮಗ) ಎಂದು ತಿಳಿಸಲು ಸಂಘವು ಹೆಮ್ಮೆ ಪಡುತ್ತದೆ.

ಮುಂದೆಯೂ ಚಿ||ಯು ಸಂಘದ ಮೇಲೆ ಅಭಿಮಾನವಿಟ್ಟು ಸಂಘಕ್ಕೆ ಸಹಾಯ ಮಾಡಲಿ ಎಂದು ಆಶಿಸುತ್ತದೆ.

ಈ ಮೂವರಿಗೂ ಸಂಘದ ಧನ್ಯವಾದಗಳು.

– ಎಂ. ನರಸಿಂಹನ್







# ಕಾರ್ಯದರ್ಶಿ ಕಾಲಂ

ಸನ್ಮಾನ್ಯ ಸಂಕೇತಿ ಬಂಧುಗಳಿಗೆಲ್ಲಾ ನಮಸ್ಕಾರಗಳು.

ವಿದ್ಯಾರ್ಥಿಗಳಿಗೆಲ್ಲಾ ಪರೀಕ್ಷಾ ಫಲಿತಾಂಶಗಳೆಲ್ಲಾ ಬಂದು, ಉತ್ತೀರ್ಣರಾದ ಸಂತೋಷದೊಂದಿಗೆ, ಹೊಸ ಶಾಲೆ, ಹೊಸ ಕಾಲೇಜು, ಹೊಸ ತರಗತಿಗಳಿಗೆ ಹೋಗುವ ಉತ್ಸಾಹ. ತಂದೆ ತಾಯಿಗಳಿಗೆ ಶುಲ್ಕ, ಸಮವಸ್ತ್ರ, ಪುಸ್ತಕ ಮುಂತಾದವುಗಳಿಗೆ ಹಣ ಒದಗಿಸುವ ಧಾವಂತ ಎಲ್ಲಾ ಮುಗಿದು ಒಂದು ಹಂತಕ್ಕೆ ಬಂದು ನೆಮ್ಮದಿಯಾಗಿರುವ ದಿನಗಳು. ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ನಮ್ಮ ಅಭಿನಂದನೆಗಳು. ಹಲ ಕೆಲವು ತೇರ್ಗಡೆಯಾಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇರಬಹುದು, ಅವರುಗಳಿಗೆ ನಮ್ಮ ಹಾರ್ದಿಕ ಸಹಾನುಭೂತಿಗಳು.

ಹಾಗೆಂದು ಅವರುಗಳೇನೂ ಹತಾಶರಾಗಬೇಕಿಲ್ಲ. ಒಂದು ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಮಾತ್ರಕ್ಕೇ ಆಕಾಶವೇನೂ ಕಳಚಿ ಬೀಳುವುದಿಲ್ಲ. ಆದ್ದರಿಂದ ಅನುತ್ತೀರ್ಣರಾದವರು ಮಾಡಬೇಕಾದುದೆಂದರೆ, ಅವರ ವೈಫಲ್ಯಕ್ಕೆ ಕಾರಣಗಳನ್ನು ಹುಡುಕಿ, ಆ ದೌರ್ಬಲ್ಯಗಳನ್ನು ತುಳಿದು ಮೇಲೇಳುವ ಪ್ರಯತ್ನಗಳನ್ನು ಮಾಡಬೇಕು. ಇದು ಕೇವಲ ಪರೀಕ್ಷೆಯಲ್ಲಿ ಅನುತ್ತೀರ್ಣರಾದವರಿಗೆ ಮಾತ್ರವಲ್ಲ, ಯಾವುದೇ ಸ್ಪರ್ಧೆಯಲ್ಲಿ ವಿಫಲರಾದವರು, ಅಥವಾ ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಗಳಿಸಿ ಉತ್ತೀರ್ಣರಾದವರಿಗೂ ಅನ್ವಯಿಸುತ್ತದೆ. ಸೋಲೇ ಗೆಲುವಿನ ಮೆಟ್ಟಿಲು ಎಂಬ ಮಾತಿನಂತೆ ಗೆಲುವಿನ ಹಾದಿಯಲ್ಲಿ ಮುಂದುವರಿಯಬೇಕು. ಇವತ್ತಿನ ನಮ್ಮ ಅವಶ್ಯಕತೆ ವಿದ್ಯೆ. ಇದನ್ನು ಸಾಧಿಸುವ ಛಲ ಇರಬೇಕು. ಸ್ಥಿರವಾದ ಮನಸ್ಸನ್ನು ಚಂಚಲಗೊಳಿಸಲು ಇಂದು ನೂರಾರು ಮಾರ್ಗಗಳಿವೆ. ಇವುಗಳಲ್ಲಿ ಅತಿ ಮುಖ್ಯವಾದವು ದೂರದರ್ಶನ, ಸಿನಿಮಾ, ಮೊಬೈಲ್ ಫೋನು ಮುಂತಾದವು. ಇವುಗಳನ್ನು ಉಪಯೋಗಿಸಬಾರದೆಂಬುದು ನಮ್ಮ ಉದ್ದೇಶವಲ್ಲ. ಆದರೆ ಇವುಗಳನ್ನು ದುರುಪಯೋಗಿಸಿ ಕೊಳ್ಳಬಾರದು. ಆದ್ದರಿಂದ ನಮ್ಮ ವಿದ್ಯಾರ್ಥಿಗಳು, ಇಂಥ ಯಾವುದೇ ಆಮಿಷಗಳಿಗೆ ವಿಚಲಿತರಾಗದೆ, ವಿದ್ಯಾರ್ಜನೆಯನ್ನು ಮಾಡಿ ಯಶಸ್ಸಿನ ಹಾದಿಯಲ್ಲಿ ಮುಂದುವರಿಯಬೇಕೆಂಬುದು ನಮ್ಮ ಕಳಕಳಿ.

– ಎಸ್. ಸಿ. ಮಂಜುನಾಥ್

# ಶುಭ ಸಮಾಚಾರಗಳು

## ಹುಟ್ಟುಹಬ್ಬ:

| ತಾರೀಖು | ಹೆಸರು |
|---|---|
| 14.05.08<br>ಬೆಂಗಳೂರು | **ಚಿ|| ಮಾಯಾ** (ಶ್ರೀಮತಿ ವಿದ್ಯಾ ಅವರ ಪುತ್ರಿ ಹಾಗೂ ಶ್ರೀಮತಿ ಮಾಲತಿ ಚಂದ್ರಶೇಖರ್ ಅವರ ಮೊಮ್ಮಗಳು) |
| 17.05.08<br>ಬೆಂಗಳೂರು | **ಚಿ|| ಸ್ವಾತಿ** (ಶ್ರೀಮತಿ ಮತ್ತು ಶ್ರೀ ಎನ್. ದೇವೀ ಪ್ರಸಾದ್ ಅವರ ಪುತ್ರಿ ಹಾಗೂ ಶ್ರೀಮತಿ ಸುವರ್ಣಾ ಮತ್ತು ಶ್ರೀ ವಿ. ನಾಗರಾಜ ಅವರ ಮೊಮ್ಮಗಳು) |

## ಚೌಲೋಪನಯನ:

| ತಾರೀಖು | ಹೆಸರು |
|---|---|
| 11.05.08<br>ಬೆಂಗಳೂರು | **ಚಿ|| ಪ್ರಜ್ವಲ್** (ಶ್ರೀಮತಿ ಸಾವಿತ್ರಿ ಮತ್ತು ಶ್ರೀ ವಿಶ್ವನಾಥ್ ಅವರ ಪುತ್ರ ಹಾಗೂ ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಹೆಚ್ ಎಸ್ ಪ್ರಭಾಕರ್ ಮತ್ತು ದಿ|| ಸುವರ್ಣಾ ಮತ್ತು ಶ್ರೀ ಎಸ್. ಸಿ. ಶ್ರೀನಿವಾಸಮೂರ್ತಿ ಅವರ ಮೊಮ್ಮಗ) |

## ಗೃಹಪ್ರವೇಶ:

| ತಾರೀಖು | ಹೆಸರು |
|---|---|
| 11.05.08<br>ಬೆಂಗಳೂರು | **ಶ್ರೀಮತಿ ವಸುಧಾ** (ಶ್ರೀಮತಿ ಸುಬ್ಬಲಕ್ಷ್ಮೀ ಮತ್ತು ದಿ|| ಎಂ. ನಾಗರಾಜ ಅವರಪುತ್ರಿ) **ಮತ್ತು ಶ್ರೀ ಆರ್. ಜೆ. ಶ್ಯಾಮಸುಂದರ್**, ಬಸವನಗುಡಿ (ಶ್ರೀಮತಿ ಶಕುಂತಲಾ ಮತ್ತು ದಿ|| ಜನಾರ್ದನ್ ಆರ್. ಎನ್. ಅವರ ಪುತ್ರ) |

## ಉಪನಯನ:

| ತಾರೀಖು | ವಟು |
|---|---|
| 25.05.08<br>ಬೆಂಗಳೂರು | **ಚಿ|| ರಾ|| ಪ್ರಣವ್ ಆರ್. ಕೌಂಡಿನ್ಯ**<br>(ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ರಾಧಾಕೃಷ್ಣ ಅವರ ಪುತ್ರ ಹಾಗೂ ಶ್ರೀಮತಿ ಸೀತಾಮಣಿ ಮತ್ತು ಶ್ರೀ ಆರ್.ಕೆ.ರಾಮಸ್ವಾಮಯ್ಯ ಅವರ ಮೊಮ್ಮಗ) |





| ತಾರೀಖು | ವಟು |
|---|---|
| 06.06.08<br>ಬೆಂಗಳೂರು | **ಚಿ|| ರಾ|| ಸುನಿಲ್ ಆರ್. ಎ.**<br>(ಶ್ರೀಮತಿ ರಾಧಾ ಮತ್ತು ಶ್ರೀ ಆನಂದರಾಮು ಎಸ್. ರುದ್ರಪಟ್ಟಣ ಅವರ ಪುತ್ರ) |

## ವಿವಾಹ ಮಹೋತ್ಸವ:

| ತಾರೀಖು | ವಧು | ವರ |
|---|---|---|
| 23.05.08<br>ಮೈಸೂರು | **ಹ||ಕುಂ||ಶೋ|| ಶ್ರೀಬೃಂದಾ**<br>(ಶ್ರೀಮತಿ ರೇಖಾ ಮತ್ತು ಶ್ರೀ ಹೆಚ್.ಎನ್. ಶ್ರೀಹರಿ ಅವರ ಪುತ್ರಿ) | **ಚಿ|| ರಾ|| ಹರ್ಷ**<br>(ಶ್ರೀಮತಿ ಸ್ವರ್ಣಾ ಮತ್ತು ಶ್ರೀ ಹೆಚ್.ವಿ.ಎಲ್.ಕೆ.ಮೂರ್ತಿ ಅವರ ಪುತ್ರ) |
| 25.05.08<br>ಬೆಂಗಳೂರು | **ಹ||ಕುಂ||ಶೋ|| ಸ್ನೇಹಾ**<br>(ಶ್ರೀಮತಿ ನೇತ್ರಾವತಿ ಮತ್ತು ಶ್ರೀ ಹೆಚ್.ವಿ. ವಿಜಯಕುಮಾರ್ ಅವರ ಪುತ್ರಿ) | **ಚಿ||ರಾ|| ರಾಘವೇಂದ್ರ**<br>(ಶ್ರೀಮತಿ ಶಾಂತಮ್ಮ ಮತ್ತು ಶ್ರೀ ನರಸಿಂಹಸ್ವಾಮಿ ಅವರ ಪುತ್ರ) |
| 30.05.08<br>ಬೆಂಗಳೂರು | **ಹ||ಕುಂ||ಶೋ|| ಶ್ರುತಿ ಬಿ. ಜೆ.**<br>(ಶ್ರೀಮತಿ ಗೀತಾ ಕುಮಾರಿ ಮತ್ತು ಶ್ರೀ ಬಿ. ಎನ್. ಜಗನ್ನಾಥ ಅವರ ಪುತ್ರಿ) | **ಚಿ||ರಾ||ಹೆಚ್.ಎನ್.ದಿನಕರ್ ಭಾರದ್ವಾಜ್**<br>(ಶ್ರೀಮತಿ ನಾಗಲಕ್ಷ್ಮೀ ಮತ್ತು ಶ್ರೀ ಹೆಚ್. ಆರ್. ನಾಗರಾಜ ಅವರ ಪುತ್ರ ಹಾಗೂ ದೊಡ್ಡ ಹನಸೋಗೆಯ ಶ್ರೀ ಹೆಚ್. ಕೆ. ರಾಮಸ್ವಾಮಿ ಅವರ ಮೊಮ್ಮಗ) |
| 30.05.08<br>ಬೆಂಗಳೂರು | **ಹ||ಕುಂ||ಶೋ|| ಶಿಲ್ಪಾ**<br>(ಶ್ರೀಮತಿ ಮತ್ತು ಶ್ರೀ ರಾಮಚಂದ್ರರೆಡ್ಡಿ ಅವರ ಪುತ್ರಿ) | **ಚಿ|| ರಾ|| ಎಸ್.ಎನ್. ಅಭಿಷೇಕ್**<br>(ಶ್ರೀಮತಿ ಸರಸ್ವತಿ ಮತ್ತು ಶ್ರೀ ಎಸ್.ಎನ್.ನರಸಿಂಹಮೂರ್ತಿ ಅವರ ಪುತ್ರ) |
| 09.06.08<br>ಬೆಂಗಳೂರು | **ಹ||ಕುಂ||ಶೋ|| ದೀಪ್ತಿ**<br>(ಶ್ರೀಮತಿ ಸುಧಾ ಮತ್ತು ಶ್ರೀ ಪ್ರಭಾಕರ್. ವಿ. ಅವರ ಪುತ್ರಿ) | **ಚಿ|| ರಾ|| ಅರವಿಂದ್ ಹನಸೋಗೆ**<br>(ಶ್ರೀಮತಿ ರತ್ನಾ ಮತ್ತು ಶ್ರೀ ಹೆಚ್. ವಿ. ಮಲ್ಲಿಕಾರ್ಜುನ ಅವರ ಪುತ್ರ) |

## ಮೇ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ರಾಜೇಶ್ ದ್ವಿವೇದಿ | ಬೆಂಗಳೂರು | 8792 | 2021 |
| ಪದ್ಮಾ ಕೃಷ್ಣ | ಬೆಂಗಳೂರು | 8793 | 2022 |
| ದಿನಕರ್ ಭಾರದ್ವಾಜ್ | ಬೆಂಗಳೂರು | 8797 | 2023 |
| ಶ್ರುತಿ ಭಾರದ್ವಾಜ್ | ಬೆಂಗಳೂರು | 8798 | 2024 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎಸ್.ನಾಗರಾಜ | ಮೈಸೂರು | 8654 | 101.00 |
| | | | (ಮಗನ ಉಪನಯನ – 08.05.08) |
| ಶರತ್ ಮಂಜುನಾಥ್ | ಬೆಂಗಳೂರು | 8781 | 500.00 |
| | | | (ಅಜ್ಜಿಯ ಕನಕಾಭಿಷೇಕ) |
| ಆರ್.ಜೆ. ಶ್ಯಾಮಸುಂದರ್ | ಬೆಂಗಳೂರು | 8783 | 1000.00 |
| | | | (ಗೃಹಪ್ರವೇಶ ) |
| ಹೆಚ್.ಎಸ್.ಪ್ರಭಾಕರ್ | ಬೆಂಗಳೂರು | 8784 | 500.00 |
| | | | (ಮೊಮ್ಮಗನ ಚೌಲೋಪನಯನ) |
| ಮೀನಾಕ್ಷಿ ಶ್ರೀಕಂಠಯ್ಯ | ಬೆಂಗಳೂರು | 8785 | 200.00 |
| | | | (ಗೃಹಪ್ರವೇಶ) |
| ಬಿ. ಆರ್. ಸತ್ಯನಾರಾಯಣ | ಬೆಂಗಳೂರು | 8786 | 101.00 |
| | | | (ಮಗನ ಮದುವೆ) |
| ಮಾಲತಿ ಚಂದ್ರಶೇಖರ್ | ಬೆಂಗಳೂರು | 8787 | 200.00 |
| | | | (ಮೊಮ್ಮಗಳ ಹುಟ್ಟುಹಬ್ಬ) |
| ಎನ್ ದೇವೀಪ್ರಸಾದ್ | ಬೆಂಗಳೂರು | 8789 | 150.00 |
| | | | (ಮಗಳ ಹುಟ್ಟುಹಬ್ಬ) |





| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎನ್. ಶ್ರೀಹರಿ | ಮೈಸೂರು | 8790 | 100.00 |
| | | | (ಮಗಳ ಮದುವೆ) |
| ರಾಧಾಕೃಷ್ಣ | ಬೆಂಗಳೂರು | 8791 | 1000.00 |
| | | | (ಮಗನ ಉಪನಯನ) |
| ಹೆಚ್.ಆರ್.ನಾಗರಾಜ್ | ಬೆಂಗಳೂರು | 8795 | 100.00 |
| | | | (ಮಗನ ಮದುವೆ) |
| ಬಿ. ಎನ್. ಜಗನ್ನಾಥ | ಬೆಂಗಳೂರು | 8796 | 101.00 |
| | | | (ಮಗಳ ಮದುವೆ) |
| ಎಸ್.ಎನ್. ನರಸಿಂಹಮೂರ್ತಿ | ಬೆಂಗಳೂರು | 8799 | 300.00 |
| | | | (ಮಗನ ಮದುವೆ) |

### ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ವಿ. ಸುರೇಶ್ ಗದ್ವಾಲ್ | ಮುಂಬಯಿ | 8794 | 1800.00 |

### ಅಶಕ್ತ ಮಾಸಾಶನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ವಿ.ವಿ. ಸುಬ್ರಹ್ಮಣ್ಯ | ಬೆಂಗಳೂರು | 8780 | 250.00 |
| ಹೆಚ್.ಎಸ್.ಸೇತೂರಾಂ ಮತ್ತು ಸಹೋದರರು | ಬೆಂಗಳೂರು | 8800 | 10,000.00 |
| | | | (ತಾಯಿ ಸುಬ್ಬಲಕ್ಷ್ಮಮ್ಮನವರ ಹೆಸರಿನಲ್ಲಿ) |

### ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಡಾ॥ ವಿನೋದಾ ಎನ್. ಮೂರ್ತಿ | ಬೆಂಗಳೂರು | 8734 | 2000.00 |
| | | | (ತಂದೆ ಸೂರ್ಯನಾರಾಯಣ ಅವರ ನೆನಪಿನಲ್ಲಿ) |

## ಮೇ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.05.08<br>ಬಾಂಬೆ | ಚಂದ್ರ ಎನ್. ಆತ್ರೇಯ<br>3 ದಿನಗಳು | |
| 01.05.08<br>ಮೈಸೂರು | ಕೃಷ್ಣಮೂರ್ತಿ ಆರ್.ವಿ. | ಸಹೋದರ ರುದ್ರಪಟ್ಣ<br>ಲಕ್ಷ್ಮೀಕಾಂತಯ್ಯ |
| 01.05.08<br>ಬೆಂಗಳೂರು | ಪಿ.ಎನ್.ಜಯರಾಂ,<br>ಪಿ.ಎನ್.ರವಿಶಂಕರ್<br>ರಾಧಾ ಜೆ, ನಂದಾ ಎಸ್. | ಅಜ್ಜ ಪಿ.ಟಿ.ಎನ್.<br>ಗುಂಡೂರಾಮಯ್ಯ |
| 02.05.08<br>ಬೆಂಗಳೂರು | ಸುಬ್ಬಲಕ್ಷಮ್ಮ | ಪತಿ ಆರ್. ಶ್ರೀನಿವಾಸಯ್ಯ |
| 02.05.08<br>ಬೆಂಗಳೂರು | ಅನಂತರಾಮು ಹೆಚ್.ಎಸ್.<br>ರವೀಂದ್ರ, ಮಂಜುನಾಥ್, ಚೈತನ್ಯ | <br>ತಾಯಿ ನರ್ಮದಮ್ಮ |
| 04.05.08<br>ಬೆಂಗಳೂರು | ರಾಮಸ್ವಾಮಿ ಬಿ. ಎಸ್. | ತಂದೆ ಅಜ್ಜಾಮೇಷ್ಟ್ರು<br>ಶ್ರೀನಿವಾಸಯ್ಯ |
| 04.05.08<br>ಬೆಂಗಳೂರು | ಡಾ|| ಎಸ್. ಮೋಹನ್‌ರಾಂ<br>ಮತ್ತು ಶಾಂತಲಕ್ಷ್ಮಿ | ಪುತ್ರಿ ನಳಿನಿ ಶ್ರೀನಿವಾಸ್ |
| 04.05.08<br>ಬಾಂಬೆ | ಧನಂಜಯ. ಎ. | ತಮ್ಮ ಹುಟ್ಟುಹಬ್ಬ |
| 04.05.08<br>ಬೆಂಗಳೂರು | ನಿರ್ಮಲಾ. ಎಸ್. | ಪಿ.ಎನ್.ಸುಬ್ರಹ್ಮಣ್ಯ<br>ಅವರ ಹುಟ್ಟುಹಬ್ಬ |
| 06.05.08<br>ಬೆಂಗಳೂರು | ಮಾಯಾ ಹೆಚ್.ವಿ. | |
| 06.05.08<br>ಬಾಂಬೆ | ಚಿತ್ತರಂಜನ್ ಬಿ. ಎನ್. | ತಂದೆ ನಾರಾಯಣಸ್ವಾಮಿ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 06.05.08<br>ಮೈಸೂರು | ನಾಗರಾಜ ಆರ್.ಎಸ್. | ಪತ್ನಿ ಶ್ರೀಮತಿ ಶ್ಯಾಮಲಾ |
| 07.05.08<br>ಬೆಂಗಳೂರು | ಮಾಯಾ ಹೆಚ್.ವಿ. | |
| 08.05.08<br>ಬೆಂಗಳೂರು | ಮೀರಾ, ಎಸ್.ಕೆ.ಚಂದ್ರಶೇಖರ್,<br>ಗೀತಾ ಸಾಲಿಗ್ರಾಂ | ಮಾತಾಮಹಿ<br>ಸಾವಿತ್ರಮ್ಮ ಆರ್.ಕೆ. |
| 08.05.08<br>ಬೆಂಗಳೂರು | ಮೀನಾಕ್ಷಿ ಹೆಚ್. ಎಸ್. | ಪತಿ ಆರ್.ಎ.<br>ನಾರಾಯಣ ರಾವ್ |
| 08.05.08<br>ಯುಎಸ್‌ಎ | ವೈದೇಹಿ ಶಿವಶಂಕರ್ | ಪುತ್ರ ರಾಂ ಶಿವಶಂಕರ್ |
| 10.05.08<br>ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳ<br>ಕಾರ್ಯ ಸಮಿತಿ | |
| 13.05.08<br>ಬೆಂಗಳೂರು | ಮೂರ್ತಿ ಬಿ. ಜಿ.ಎಸ್. | ತಾಯಿ ಜಯಲಕ್ಷಮ್ಮ |
| 15.05.08<br>ಯುಎಸ್‌ಎ | ಮತ್ತೂರು ಆರ್. ಬಾಲಕೃಷ್ಣ | ತಂದೆ ಎನ್. ರಾಮಸ್ವಾಮಿ |
| 15.05.08<br>ಬೆಂಗಳೂರು | ನಾಗೇಶ್ ಬಿ. ಆರ್. | ತಂದೆ<br>ಬಿ. ಕೆ. ರಾಮಸ್ವಾಮಯ್ಯ |
| 15.05.08<br>ಬಾಂಬೆ | ಮೀರಾ ಜಂಬುನಾಥನ್ | ಪತಿ ಜಂಬುನಾಥನ್<br>ಎಸ್. ಎನ್. |
| 16.05.08<br>ಬೆಂಗಳೂರು | ಬಾಲಕೃಷ್ಣ ಹೆಚ್. ಎಸ್. | ಪುತ್ರಿ ನಾಗವಲ್ಲೀ |
| 18.05.08<br>ಬೆಂಗಳೂರು | ಪ್ರಭಾಕರ ಹೆಚ್. ಎಸ್. | ಅತ್ತೆ ಛಾಯಾ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 18.05.08 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಮಾವ ಬಿ. ಶ್ರೀನಿವಾಸಯ್ಯ |
| 19.05.08 ಬೆಂಗಳೂರು | ಸುಬ್ಬಲಕ್ಷ್ಮಮ್ಮ | ತಂದೆ ನರಸಿಂಹಯ್ಯ |
| 19.05.08 ಬೆಂಗಳೂರು | ಯಶೋದಮ್ಮ ಮತ್ತು ಮಕ್ಕಳು | ಎಂ. ಕೆ. ಶಂಕರ ನಾರಾಯಣ |
| 20.05.08 ಯುಎಸ್ಎ | ಡಾ|| ಸುಬ್ಬರಾವ್ ಆರ್.ಸಿ. | ಸಹೋದರ ಅತ್ರಿ ಶರ್ಮ |
| 23.05.08 ಬಾಂಬೆ | ಶ್ರೀನಿವಾಸಮೂರ್ತಿ ಆರ್.ವಿ. ಮತ್ತು ರಾಜೇಶ್ವರಿ | ವಿವಾಹ ವಾರ್ಷಿಕೋತ್ಸವ |
| 23.05.08 ಬೆಂಗಳೂರು | ಡಾ|| ವಿಶ್ವೇಶ್ವರಯ್ಯ ಆರ್.ಎನ್. | ತಂದೆ ಆರ್.ಪಿ. ನಾರಾಯಣ ರಾವ್ |
| 24.05.08 ಬೆಂಗಳೂರು | ಸುಬ್ರಹ್ಮಣ್ಯ ಬಿ.ಎನ್.ವಿ. | ಅಜ್ಜಿ ಪುಟ್ಟಕ್ಕಯ್ಯಮ್ಮ |
| 24.05.08 | ಸುಬ್ರಹ್ಮಣ್ಯಂ ಬಿ.ಎನ್.ವಿ. ನಾರಾಯಣ ಸ್ವಾಮಿ | ತಂದೆ ಅಣ್ಣಾಜಿ ಬೆಂಗಳೂರು |
| 24.05.08 ಮೈಸೂರು | ನಾಗರಾಜ್ ಎಸ್.ಎನ್. ಎಸ್.ಎನ್. ರವೀಶ್ | ಹಿರಿಯ ಸಹೋದರಿ ನಾಗಲಕ್ಷ್ಮಿ |
| 25.05.08 ಬೆಂಗಳೂರು | ಡಾ|| ಎಸ್.ಮೋಹನ್ ರಾಂ | ಪುತ್ರಿ ನಳಿನಿ ಶ್ರೀನಿವಾಸ್ ಹುಟ್ಟುಹಬ್ಬ |
| 25.05.08 ಬೆಂಗಳೂರು | ರಮೇಶ್ ಎಸ್.ಜಿ. ಮತ್ತು ಸಹೋದರರು | ತಂದೆ ಆರ್. ಗಂಗಾಧರಯ್ಯ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 27.05.08 ಬೆಂಗಳೂರು | ಜಯರಾಂ ಬಿ.ಎಸ್. | ತಾಯಿ ಪಾರ್ವತಮ್ಮ |
| 27.05.08 ಯುಎಸ್ಎ | ಶಿವರಾಂ ಆರ್. | ತಂದೆ ರಾಧಾಕೃಷ್ಣ |
| 27.05.08 ಯುಎಸ್ಎ | ದತ್ತಾತ್ರಿ | ತಂದೆ ರಾಧಾಕೃಷ್ಣ |
| 27.05.08 ಹಾಸನ | ಪ್ರಣತಾರ್ತಿ ಹರನ್ | ಪುತ್ರಿ ಶರ್ವಾಣಿ ಹರನ್ ಹುಟ್ಟುಹಬ್ಬ |
| 28.05.08 ಹಾಸನ | ಸುಬ್ರಹ್ಮಣ್ಯ ಆರ್. | ಪುತ್ರನ ವಿವಾಹದ ದಿನ |
| 30.05.08 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಲಕ್ಷ್ಮೀದೇವಮ್ಮ (ಮಾತಾಮಹಿ) |
| 30.05.08 ಬೆಂಗಳೂರು | ಸೀತಾ ಮುಕುಂದ ರಾವ್ | ಪತಿ ಎಸ್. ಮುಕುಂದ ರಾವ್ |
| 30.05.08 ಬೆಂಗಳೂರು | ನರಸಿಂಹನ್. ಎಂ. | ತಂದೆ ಮಲ್ಲಿಕಾರ್ಜುನ ಶಾಸ್ತ್ರಿ |
| 31.05.08 ಬೆಂಗಳೂರು | ಸೀತಾ ಬಿ. ವಿ. | ತಂದೆ ಮಲ್ಲಿಕಾರ್ಜುನ ಶಾಸ್ತ್ರಿ |
| 31.05.08 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಅತ್ತೆ ಪಾರ್ವತಮ್ಮ ಶ್ರೀನಿವಾಸಯ್ಯ |
| 31.05.08 ಬೆಂಗಳೂರು | ಸುಧೀರ್. ಪಿ. | ತಾಯಿ ಕಮಲಾ ಪರಶುರಾಮ ರಾವ್ |

## ಪ್ರತಿಭೆ



**ಡಾ|| ವಿ. ಎನ್. ಪ್ರಶಾಂತ್**

ಏಪ್ರಿಲ್ 2008ರ **M.D.** ಪರೀಕ್ಷೆಯಲ್ಲಿ (ರಾಜೀವ್ ಗಾಂಧಿ ವಿಶ್ವವಿದ್ಯಾಲಯ) **General Medicine** ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾನೆ. ಮುಂದೆ **Doctor of Medicine (Cardiology)** ಓದುವ ಇಚ್ಛೆ ಇದೆ.

ತಂದೆ : ಶ್ರೀ ವಿ. ನಾಗರಾಜ

ತಾಯಿ : ಶ್ರೀಮತಿ ವಿ. ಎನ್. ಸುವರ್ಣ

ಅಜ್ಜಂದಿರು : ಡಾ|| ಕೆ. ಮಂಜುನಾಥಯ್ಯ ಮತ್ತು ದಿ|| ಎನ್. ವೆಂಕಟರಾಮಯ್ಯ

ಅಜ್ಜಿಯರು : ಶ್ರೀಮತಿ ಸೀತಾಲಕ್ಷಮ್ಮ ಮತ್ತು ದಿ|| ಮೀನಾಕ್ಷಮ್ಮ

---



**ಚಿ|| ಅನಿಲ್ ಕುಮಾರ್. ಎಸ್.**

ದ್ವಿತೀಯ ಪಿಯುಸಿ ಶೇ. 92,
ಸಿ.ಇ.ಟಿ. ವೈದ್ಯಕೀಯ ವಿಭಾಗದಲ್ಲಿ 47ನೇ ರ್‍ಯಾಂಕ್

ತಂದೆ : ಡಾ|| ಎಸ್. ಡಿ. ಸುಬ್ಬರಾವ್

ತಾಯಿ : ಶ್ರೀಮತಿ ಗಾಯಿತ್ರಿ

ಅಜ್ಜಂದಿರು : ದಿ|| ಡಾ|| ಎಸ್. ಧ್ರುವನಾರಾಯಣ್ ಮತ್ತು ದಿ|| ಪಿ. ಕೆ. ಸುಬ್ರಹ್ಮಣ್ಯಂ

ಅಜ್ಜಿಯರು : ಶ್ರೀಮತಿ ಲಕ್ಷ್ಮೀಬಾಯಿ ಮತ್ತು ಶ್ರೀಮತಿ ಸೀತಾಲಕ್ಷ್ಮೀ







**ಚಿ|| ಪಿ. ಎನ್. ಕಾರ್ತೀಕ್**

**10ನೇ ತರಗತಿ (ಐ.ಸಿ.ಎಸ್.ಇ.) ಶೇ. 96.14**

ತಂದೆ : ಶ್ರೀ ಪಿ. ಎಸ್. ನಾರಾಯಣ ಪ್ರಸಾದ್

ತಾಯಿ : ಶ್ರೀಮತಿ ಆರ್. ಎನ್. ಲತಾ

ಅಜ್ಜಂದಿರು : ಶ್ರೀ ಆರ್. ಎನ್. ನಾರಾಯಣ ಸ್ವಾಮಿ
(ರಿಟೈರ್ಡ್ ಆರ್.ಟಿ.ಒ.) ಮತ್ತು
ದಿ|| ಪಿ. ಎನ್. ಶಾಮಣ್ಣ

ಅಜ್ಜಿಯರು : ಶ್ರೀಮತಿ ಸತ್ಯವತಿ ಮತ್ತು ಶ್ರೀಮತಿ ಲಕ್ಷ್ಮೀ ಆರ್. ಎನ್. (ಚಿತ್ರ)



**ಕು|| ಶ್ರುತಿ. ಎಸ್.**

**10ನೇ ತರಗತಿ ಶೇ. 94**

ತಂದೆ : ಶ್ರೀ ಶ್ರೀಧರ್. ಎಸ್.
ಎಜಿಎಂ, ಬಿ.ಇ.ಎಲ್., ಬೆಂಗಳೂರು

ತಾಯಿ : ಶ್ರೀಮತಿ ವಿಜಯಲಕ್ಷ್ಮೀ, ಲೆಕ್ಚರರ್

ಅಜ್ಜಂದಿರು : ಶ್ರೀ ಗೋಪಾಲಮೂರ್ತಿ ಬಿ. ಎನ್. ಬಸವಾಪಟ್ಟಣ ಮತ್ತು
ದಿ|| ಸುಬ್ರಾಮಯ್ಯ ಬಿ. ವಿ.

ಅಜ್ಜಿಯರು : ಶ್ರೀಮತಿ ನಾಗಲಕ್ಷಮ್ಮ ಆರ್. ಮತ್ತು ಶ್ರೀಮತಿ ಸುಬ್ಬಲಕ್ಷಮ್ಮ ಎಂ.ಆರ್.



**ಚಿ|| ಶಾರದಾ ಪ್ರಸಾದ್. ಎನ್.**

**10ನೇ ತರಗತಿ ಶೇ. 93.4**

ತಂದೆ : ಶ್ರೀ ಶಾಂತಾರಾಮ್. ಎನ್.

ತಾಯಿ : ಶ್ರೀಮತಿ ಶಾಲಿನಿ

ಅಜ್ಜಂದಿರು : ಶ್ರೀ ಎಸ್. ಎನ್. ಸತ್ಯನಾರಾಯಣ್ ಮತ್ತು ಕೆ. ಆರ್. ನರಸಿಂಹಮೂರ್ತಿ

ಅಜ್ಜಿಯರು : ಶ್ರೀಮತಿ ವೇದಾವತಿ ಮತ್ತು ಶ್ರೀಮತಿ ಸುಂದರಮ್ಮಣ್ಣಿ



**ಚಿ|| ಎಂ. ಎನ್. ಅಭಿನೀತ್**

**10ನೇ ತರಗತಿ ಶೇ. 93.28**

ತಂದೆ : ಶ್ರೀ ಎಂ. ಎಸ್. ನಾಗಭೂಷಣ

ತಾಯಿ : ಶ್ರೀಮತಿ ಹೆಚ್. ವಿ. ಆಶಾ

ಅಜ್ಜಂದಿರು : ಶ್ರೀ ಎಂ. ಎಸ್. ಶ್ರೀಕಂಠಯ್ಯ ಮತ್ತು ದಿ|| ಹೆಚ್.ಎನ್.ವೆಂಕಟರಾಮಯ್ಯ

ಅಜ್ಜಿಯರು : ಶ್ರೀಮತಿ ನಾಗರತ್ನಮ್ಮ ಮತ್ತು ಶ್ರೀಮತಿ ಪಾರ್ವತಮ್ಮ

**ಇವರೆಲ್ಲರಿಗೂ ಸಂಘದ ಅಭಿನಂದನೆಗಳು**





## ಉಡುಗೊರೆಗಳು ಬೇಕೆ ?

ಶುಭ ಸಮಾರಂಭಗಳೆಂದರೆ ನಮ್ಮೆಲ್ಲರಿಗೂ ಇಷ್ಟವೇ. ಸಂಭ್ರಮ – ಸಡಗರ'– ಉತ್ಸಾಹ – ಉಲ್ಲಾಸ – ಸಿಹಿ ಭೋಜನ. ದೈನಿಕ ಜಂಜಾಟದಿಂದ ಹೊರತಾದ ಆ ವಾತಾವರಣ ಮನಸ್ಸಿಗೆ ಮುದನೀಡುತ್ತದೆ.

ನಾಮಕರಣ – ಚೌಲ– ಉಪನಯನ – ವಿವಾಹ – ಗೃಹಪ್ರವೇಶ, ಈ ಎಲ್ಲದರಲ್ಲೂ ಉಡುಗೊರೆಗೆ ಮಹತ್ವದ ಪಾತ್ರವಿದೆ. ಜನ್ಮದಿನ, ವಿವಾಹ ವಾರ್ಷಿಕೋತ್ಸವ ದಿನ, ಸತ್ಯನಾರಾಯಣ ಪೂಜೆ, ಸೀಮಂತ, ಬಾಲಿಕೆಯು ಪ್ರೌಢಳಾದಾಗ ಆರತಿ, ಇಲ್ಲಿಯೂ ಉಡುಗೊರೆಗಳನ್ನು ನೀಡುವ ಪರಿಪಾಠವಿದೆ.

ಈ ಪರಿಪಾಠ ಏಕೆ ಬೆಳೆದುಬಂತು ? ಇದು ಏಕೆ ಅನಿವಾರ್ಯ ? ಎಂಬುದರ ಬಗ್ಗೆ ಕೊಂಚ ಚಿಂತಿಸಬೇಕಾಗುತ್ತದೆ. ನಾವೆಲ್ಲ ಚಿಕ್ಕವರಾಗಿದ್ದಾಗ ನೋಡಿದಂತೆ ವಸ್ತ್ರಗಳನ್ನು ನೀಡುವುದಕ್ಕೆ ಪ್ರಾಧಾನ್ಯವಿತ್ತು. ಕಾರು, ಸ್ಕೂಟರ್, ಫ್ರಿಜ್, ಟಿ.ವಿ., ಮೊಬೈಲ್‌ಗಳು ಈಗೀಗ ಶುಭಸಂದರ್ಭದ ಉಡುಗೊರೆಗಳಾಗುತ್ತಿದ್ದು ನೀಡುವವರಲ್ಲಿಯೇ ಪರೋಕ್ಷ ಪೈಪೋಟಿ ಇರುವಂತೆ ಕಂಡುಬರುತ್ತದೆ. ಉಡುಗೊರೆ ಸಂಪ್ರದಾಯವನ್ನು ಬದಿಗಿಟ್ಟು ಸಮಾರಂಭಗಳನ್ನು ಮಾಡಲು ಸಾಧ್ಯವಿಲ್ಲವೆ ಎಂಬ ಬಗ್ಗೆ ಎಲ್ಲರೂ ಗಂಭೀರವಾಗಿ ಚಿಂತಿಸಬೇಕಿದೆ.

ಉಳ್ಳವರು ಸತ್ಸಂಪ್ರದಾಯಗಳಿಗಿಂತ ಕೆಟ್ಟ ಸಂಪ್ರದಾಯಗಳನ್ನು ಹಾಕಿಕೊಡುವುದೇ ಹೆಚ್ಚು. ಅರೆಬರೆ ಜ್ಞಾನವುಳ್ಳವರು ಅವುಗಳ ಅಂಧಾನುಕರಣೆಗೆ ಶರಣಾಗುತ್ತಾರೆ. ಉಡುಗೊರೆಯ ವಿಷಯದಲ್ಲಿಯೂ ಅಂಧಾನುಕರಣೆಯ ಹಾವಳಿಯಿದೆ ಎನಿಸುತ್ತದೆ.

ಯಾರೋ ಒಬ್ಬರು ವಜ್ರದುಂಗುರವನ್ನು ಉಡುಗೊರೆಯಾಗಿ ಕೊಟ್ಟರೆ ಬಡವನೂ ಹಾಗೆ ಕೊಡಲಾಗುತ್ತದೆಯೇ ? ಯಾರೋ ಒಬ್ಬರು ಬೆಲೆಬಾಳುವ ಉಡುಗೊರೆಯನ್ನು ಅವಿವೇಕದಿಂದ ಕೊಟ್ಟರೆ ಅದನ್ನು ಪಡೆದವರಿಗೆ ಅದರ ಎದುರು ಮಿಕ್ಕೆಲ್ಲ ಉಡುಗೊರೆಗಳೂ ನಿಸ್ಸಾರ ಅಥವಾ ಕೀಳು ಎನಿಸತೊಡಗುತ್ತದೆ. ಬೆಲೆಬಾಳುವ ಉಡುಗೊರೆ ಕೊಡುವ ಪ್ರವೃತ್ತಿಯವರು ವಿವೇಕಿಯಾಗಿದ್ದರೆ ಖಾಸಗಿಯಾಗಿ ಅದನ್ನು ಕೊಡಬಹುದಿತ್ತು. ಮಿಕ್ಕ ಉಡುಗೊರೆಗಳು ತಾತ್ಸಾರಕ್ಕೆ ಗುರಿಯಾಗದಂತೆ ಎಚ್ಚರವಹಿಸಬಹುದಿತ್ತು.

ಪದಶಃ ಅರ್ಥಕ್ಕೆ ಬಂದರೆ 'ಉಡು' ಎಂಬುದೇ ಮೂಲ ಪದ. 'ಕೊರೆ' – ಎಂದರೆ ತುಂಡು, ಚೂರು ಎಂಬ ಅರ್ಥವಿದೆ. ಉಡು ಎಂಬುದು ವಸ್ತ್ರಗಳನ್ನೇ ಪರೋಕ್ಷವಾಗಿ ಸೂಚಿಸುತ್ತದೆ. ಸ್ವಲ್ಪ ವಸ್ತ್ರಗಳನ್ನು ವಿವಾಹ, ಉಪನಯನಗಳಲ್ಲಿ ಪತಿ, ಪತ್ನಿಯರ ಕುಟುಂಬದವರು ಕೊಡುವ ಕ್ರಮ ಇದ್ದದ್ದು ಸ್ಪಷ್ಟ. ನಾವೆಲ್ಲರೂ ತಿಳಿದಂತೆ ಬಹುತೇಕ ವಿಪ್ರಕುಟುಂಬಗಳಲ್ಲಿ ಹಿಂದೆ ಬಡತನವೇ ಇರುತ್ತಿತ್ತು. ಕಷ್ಟಪಟ್ಟು ಒಂದು ಶುಭ ಸಮಾರಂಭ

ಮಾಡುತ್ತಿದ್ದರು. ಆನಂತರದಲ್ಲಿ ಸ್ವಲ್ಪಕಾಲ ಕಷ್ಟ ಪರಿಸ್ಥಿತಿ ಎದುರಿಸಬೇಕಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಬಟ್ಟೆ ಕೊಳ್ಳಲೂ ಹಣವಿರುತ್ತಿತ್ತೋ ಇಲ್ಲವೋ. ಆದ್ದರಿಂದ ಶುಭ ಸಮಾರಂಭ ಮಾಡಿದವರಿಗೆ ಉಡುವ ಬಟ್ಟೆಗಳಿಗೆ ಕೊರತೆಯಾಗದಿರಲಿ ಎಂದು ಈ ಉಡು-ಕೊ(ಗೊ)ರೆ ಪದ್ಧತಿ ಒಂದು ಸಾಮಾಜಿಕ ಸಹಾನುಭೂತಿ ಕ್ರಮವಾಗಿ ಬೆಳೆದುಬಂದಂತೆ ತೋರುತ್ತದೆ. ಆದರೆ ಈಗೀಗ ಉಡುಗೊರೆ ಪದ್ಧತಿ ಅರ್ಥಹೀನ ಮಟ್ಟಕ್ಕೆ ಇಳಿದು ವ್ಯಾವಹಾರಿಕ ಪ್ರವೃತ್ತಿಯನ್ನು ಬಡಿದೆಬ್ಬಿಸುತ್ತಿದೆ ಎಂದೆನ್ನಬಹುದು. ಶುಭ ಸಮಾರಂಭದಲ್ಲಿ (ಉಡುಗೊರೆ) ಕೊಡುವುದೆಂದರೆ, ಪಡೆದುಕೊಳ್ಳಬೇಕೆಂಬುದನ್ನು ಜಾಗೃತಗೊಳಿಸುಕೊಳ್ಳುವ ಅಪ್ಪಟ ವ್ಯಾವಹಾರಿಕತೆಯೇ ಆಗಿದೆ.

ಸುಮಾರು 15 ವರ್ಷದ ಹಿಂದೆ ಸಣ್ಣ ಕೆಲಸದಲ್ಲಿದ್ದ ಬಡ ಯುವಕನೊಬ್ಬ ವಿವಾಹವಾದ. ಉಡುಗೊರೆಗಳೂ ಬಂತು. ನೋಡಿದರೆ ಅವೆಲ್ಲ ಸ್ಟೀಲ್ ದಬರಿಗಳು ಮತ್ತು ತಟ್ಟೆಗಳು. ವಧು-ವರರ ಕುಟುಂಬದವರೂ ಅವರ ಅಗತ್ಯತೆಯನ್ನು ಗಮನಿಸಲೇ ಇಲ್ಲ. ಸ್ಟೀಲ್ ಪಾತ್ರೆಗಳನ್ನು ಮೂಟೆಕಟ್ಟಿ ಬಂಧುಗಳ ಮನೆಯಲ್ಲಿಟ್ಟು ಅವನು ಮಹಾನಗರಕ್ಕೆ ಹೊರಟ ಹೊಟ್ಟೆಪಾಡಿಗಾಗಿ.

ಇನ್ನೊಂದು ಕುಟುಂಬ. ತಂದೆ-ತಾಯಿ ಇಬ್ಬರೂ ಬ್ಯಾಂಕ್ ಅಧಿಕಾರಿಗಳು. ಮಗನೂ ಒಳ್ಳೆಯ ಕೆಲಸದಲ್ಲಿದ್ದ. ಅವನೇ ವರ. ಉಡುಗೊರೆ ಕೊಡುವವರು ಬಣ್ಣದ ಕವರ್‌ಗಳನ್ನು ಹೆಚ್ಚಾಗಿ ಕೊಡುತ್ತಿದ್ದರು. ಅಂದರೆ ದೊಡ್ಡ ಮೊತ್ತದ ನೋಟು ಇಲ್ಲವೇ ಗಿಫ್ಟ್ ಚೆಕ್‌ಗಳು. ತಿಂಗಳೊಂದಕ್ಕೆ ತಂದೆ-ತಾಯಿ-ಮಗನ ವರಮಾನವೇ ಏನಿಲ್ಲವೆಂದರೂ ಅರ್ಧ ಲಕ್ಷವನ್ನೂ ದಾಟಿ ಹೋಗುತ್ತಿತ್ತು. ಇಂತಹವರಿಗೆ ಪರೋಕ್ಷವಾಗಿ 'ಹಣದ ನೆರವು' ! ಇಂತಹ ಸಮೃದ್ಧ- ಸಂತೃಪ್ತ ಕುಟುಂಬಕ್ಕೆ ಹಣದ ಉಡುಗೊರೆ ಕೊಡುವುದು ವಿವೇಕವೆ ? ಯಾರು ಅವಿವೇಕಿಗಳು ? ಪಡೆದುಕೊಳ್ಳುವವರೋ ಕೊಡುವವರೋ ?

ಇವೆಲ್ಲದರ ಹಿಂದೆ ಇರುವುದು ಅತಿಯಾಸೆ. ಸಮಾಜ ವಿರೋಧಿ ನಿಲುವುಗಳು ಮಾತ್ರ. ಬಡ ಕುಟುಂಬಗಳ ವಿವಾಹದಲ್ಲಿ ಎಲ್ಲರೂ ಹಣದ 'ಉಡುಗೊರೆ' ಕೊಡುವುದರಲ್ಲಿ ಅರ್ಥವಿದೆ. ಮಧ್ಯಮ ವರ್ಗ, ಮೇಲು ಮಧ್ಯಮ ವರ್ಗ ಮತ್ತು ಶ್ರೀಮಂತ ವರ್ಗದವರ ಮದುವೆಗಳಲ್ಲಿ ಎಲ್ಲರೂ ಪುಸ್ತಕಗಳನ್ನು ಉಡುಗೊರೆಯಾಗಿ ಕೊಡಬಹುದು. ಈ ವರ್ಗದವರಲ್ಲಿ ಪುಸ್ತಕ ಪ್ರೇಮ ಬೆಳೆಸಲು ಇದೊಂದೇ ದಾರಿ. ಪುಸ್ತಕಗಳನ್ನು ಕೊಡುವಾಗಲೂ ದಯವಿಟ್ಟು ನೀತಿ ಬೋಧಕವಾದ ಅಥವಾ ಧಾರ್ಮಿಕ ಪುಸ್ತಕಗಳನ್ನು ಮಾತ್ರ ಕೊಡಿ. ಭಾವನೆಗಳನ್ನು ಕೆರಳಿಸುವ ಯಾವುದೇ ಪುಸ್ತಕವನ್ನೂ ಕೊಡಬೇಡಿ.

ಉಡುಗೊರೆ ಎಂಬುದು ದೀರ್ಘಕಾಲದಿಂದ ಉಳಿದು ಬಂದಿರುವ 'ಬೆರಳು ಚೀಪುವ ಚಟ'. ಇದನ್ನು ಬಲವಂತದಿಂದ ಬಿಡಿಸಲಾಗುವುದಿಲ್ಲ. ಉಪಾಯದಿಂದಲೇ ಬಿಡಿಸಬೇಕು. ಉಡುಗೊರೆಯಲ್ಲಿನ ವ್ಯಾವಹಾರಿಕ ನಿರೀಕ್ಷೆಯನ್ನು ಚಿವುಟಿ ಹಾಕಬೇಕಾದುದೇ ನಮ್ಮ ಧರ್ಮ.





ಯಾವುದೇ ಧಾರ್ಮಿಕ ಪತ್ರಿಕೆಯ ವಾರ್ಷಿಕ, ಪಂಚವಾರ್ಷಿಕ ಚಂದಾ ರಸೀತಿಯೂ ಉಡುಗೊರೆಯಾಗುತ್ತದೆ. 'ಅದು ಬೇಕು – ಇದು ಬೇಕು' ಎನ್ನುವ ಅತಿಯಾಸೆ ನೀಗಿ 'ಅದು ಇಲ್ಲದಿದ್ದರೂ ಪರವಾಗಿಲ್ಲ – ಇದು ಸಿಗದಿದ್ದರೂ ಚಿಂತೆಯಿಲ್ಲ, ನನ್ನ ಗುರುಗಳು, ನನ್ನ ದೇವರು ನನಗೆ ಬೇಕಾದುದನ್ನು ಖಂಡಿತ ಒದಗಿಸಿಕೊಡುತ್ತಾರೆ' ಎಂಬ ದೃಢ ನಂಬಿಕೆ ನಮ್ಮ ಅಂತರಂಗದಲ್ಲಿ ಪ್ರಜ್ವಲಿಸಬೇಕಿದೆ.

ಉಡುಗೊರೆಗಳನ್ನು ಕೊಡಬೇಡಿ – ಎಂದು ಸಾಕ್ಷಾತ್ ಭಗವಂತನೇ ಪ್ರತ್ಯಕ್ಷವಾಗಿ ಬಂದು ಹೇಳಿದರೂ ನಮ್ಮ ಸಮಾಜ ಸ್ವೀಕರಿಸುವ ಸ್ಥಿತಿಯಲ್ಲಿ ಇಲ್ಲ. ಏಕೆಂದರೆ ವ್ಯಾವಹಾರಿಕ ಪ್ರಜ್ಞೆ ಎಂಬ ಹೆಬ್ಬಾವು ಆ ರೀತಿ ಅವರನ್ನು ಬಿಗಿದಪ್ಪಿದೆ. ಸಮಾಜದಲ್ಲಿ ಅಸಹಾಯಕ ವೃದ್ಧರಿದ್ದಾರೆ. ಬಡ ವಿದ್ಯಾರ್ಥಿಗಳಿದ್ದಾರೆ. ಯಾರ ಆಸರೆಯೂ ಇಲ್ಲದ ವಿಧವೆಯರಿದ್ದಾರೆ. ಚಿಕಿತ್ಸೆಗೆ ಹಣವಿಲ್ಲದ ರೋಗಿಗಳಿದ್ದಾರೆ. ಇವರ ಹೃದಯ ದೇಗುಲದಲ್ಲಿ ಭಗವಂತನಿಲ್ಲವೇ ? ಇವರಿಗಾಗಿ ಕೊಡಬೇಕೆಂದು ನಿಮಗನಿಸುವುದೇ ಇಲ್ಲವೆ ? ದೀನರಿಗೆ, ಆರ್ತರಿಗೆ, ಆರ್ಥಿಕವಾಗಿ ತೊಂದರೆಯಲ್ಲಿರುವವರಿಗೆ ಅವರಿಂದ ಕೋರಿಕೆ ಬರಲಿ ಎಂದು ನಿರೀಕ್ಷಿಸದೆ ನೆರವು ನೀಡಿ. ನಂತರದಲ್ಲಿ ನಿಮಗೆ ಭಗವಂತನಿಂದ ಉಡುಗೊರೆ ಬರತೊಡಗುತ್ತದೆ. ಉಡುಗೊರೆ ವಿಷಯದಲ್ಲಿ ಸಾಂಪ್ರದಾಯಿಕ ನಿಲುವು ಮತ್ತು ಅಂಧಾನುಕರಣೆಯನ್ನು ದಯಮಾಡಿ ಬದಲಿಸಿಕೊಳ್ಳಿ. ಇಂದಿನಿಂದ ಶ್ರೇಷ್ಠ ಪುಸ್ತಕಗಳೇ ನೀವು ಕೊಡುವ ಉಡುಗೊರೆಯಾಗಲಿ.

– ಸಂಗ್ರಹ

## ಬೆಂಗಳೂರು ಸಂಕೇತಿ ಮಹಿಳಾ ಸಮಾಜ

**ದಿನಾಂಕ 31.05.2008 ರಂದು ಆದರ್ಶ ವನಿತಾ ಸಮಾಜದಲ್ಲಿ ಬೆಳಿಗ್ಗೆ 11 ಘಂಟೆಗೆ ಶ್ರೀಮತಿ ಮಧುಶ್ರೀ ಅವರಿಂದ ''ಸಮತೋಲನ ಆಹಾರ ಮತ್ತು ಸಕ್ಕರೆ ರಹಿತ ಸಿಹಿ ತಿಂಡಿಗಳು'' ಇವುಗಳ ಬಗ್ಗೆ ಒಂದು ತಿಳುವಳಿಕೆಯ ಕಾರ್ಯಕ್ರಮವಿತ್ತು. ಅಷ್ಟೇ ಅಲ್ಲದೆ ಕೆಲವು ಸಕ್ಕರೆರಹಿತ ಸಿಹಿ ತಿಂಡಿಗಳನ್ನು ಅಲ್ಲಿಯೇ ತಯಾರಿಸಿ ರುಚಿ ತೋರಿಸಲಾಯಿತು. ಅಂದಿನ ಆತಿಥೇಯರುಗಳು ಶ್ರೀಮತಿಯರಾದ ಉಮಾ. ಎಸ್., ಮನೋನ್ಮಣಿ ಎಸ್.ವಿ., ಮನೋನ್ಮಣಿ, ನಾಗಮಣಿ, ಮನೋನ್ಮಣಿ, ಮಂಜುಳಾ. ವಿ, ನಾಗಮಣಿ, ಗೀತಾ ಬಿ ಜಿ ಎಸ್ ಮತ್ತು ನಾಗಮಣಿ.**

**ರು. ಕೃ. ಗೀತಾಮಣಿ,**
**ಗೌ|| ಕಾರ್ಯದರ್ಶಿ**
**ದೂ : 26695657**

## ಸಮಾಚಾರ ಸಂಗ್ರಹ

**ಪೆಟ್ರೋಲಿಯಂ ಬೆಲೆ ಏರಿಕೆ : ಎಲೆಕ್ಟ್ರಿಕ್-ವಾಹನಗಳಿಗೆ ಬೇಡಿಕೆ! (24 ಮೇ 08 : ಪಿಟಿಐ) ಹೈದರಾಬಾದ್ :** ಡೀಸೆಲ್‌ಗಳ ಬೆಲೆ ಏರುತ್ತಿರುವುದರಿಂದ ಬಡವರ ಕಷ್ಟ ಜಾಸ್ತಿಯಾಗುತ್ತಿದೆ. ಹಾಗಾಗಿ ಪೆಟ್ರೋಲಿಯಂ ಆಧಾರಿತ ವಾಹನಗಳನ್ನೇ ಸದಾಕಾಲ ನಂಬಿಕೊಂಡಿರಲು ಸಾಧ್ಯವಿಲ್ಲ. ಹಾಗಾಗಿ ಪೆಟ್ರೋಲಿಯಂ ವಾಹನಗಳನ್ನು ಬಿಟ್ಟು ಬೇರೆ ರೀತಿಯ ವಾಹನಗಳನ್ನು ಹುಡುಕುವುದು ಅನಿವಾರ್ಯವಾಗಿದೆ. ವಿದ್ಯುತ್‌ನಿಂದ ಚಲಿಸುವ ವಾಹನಗಳನ್ನು ಅದರಲ್ಲಿಯೂ ಬ್ಯಾಟರಿ ವಿದ್ಯುತ್‌ನಿಂದ ಓಡುತ್ತಿರುವ ಮೋಟರುಗಳನ್ನು ಅಳವಡಿಸಿ, ಸಮಸ್ಯೆಗೆ ಪರಿಹಾರವನ್ನು ಹುಡುಕಲಾಗುತ್ತಿದೆ. ಈಗ ಬೆಲೆ ಏರಿಕೆಯಿಂದ ಉಂಟಾಗಿರುವ ಬಿಕ್ಕಟ್ಟಿನಿಂದ ಲಾಭ ಪಡೆಯಲು ಎಲೆಕ್ಟ್ರಿಕ್ ವಾಹನ ತಯಾರಕರು ಸಿದ್ಧವಾಗಿದ್ದಾರೆ. ಬ್ಯಾಟರಿ ಚಾಲಿತ ದ್ವಿಚಕ್ರ ವಾಹನದ ಬ್ಯಾಟರಿಯನ್ನು (ನಮ್ಮ ಮೊಬೈಲ್ ಫೋನನ್ನು ಛಾರ್ಜ್ ಮಾಡುವಂತೆ) ಛಾರ್ಜ್ ಮಾಡಬೇಕು. ಹೀಗೆ ಛಾರ್ಜ್ ಆದ ಬ್ಯಾಟರಿಯು ವಾಹನವನ್ನು 70 ಕಿ.ಮೀ.ವರೆಗೆ ನಡೆಸುತ್ತದೆ. ನಂತರ ಮತ್ತೆ ಛಾರ್ಜ್ ಮಾಡಬೇಕು. (ಈಗ ಇರುವ ಪೆಟ್ರೋಲ್ ಬಂಕ್‌ಗಳು ನಂತರ ಛಾರ್ಜ್ ಸೆಂಟರ್ಸ್ ಆಗಬಹುದು!) ಇದಕ್ಕೆ 4 ಅಥವಾ 5 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇಂತಹ ವಾಹನಗಳು ಹೊಗೆ ಕಾಡುವುದಿಲ್ಲ ಹಾಗೂ ಶಬ್ದವೂ ಕಡಿಮೆ ಇರುತ್ತದೆ. ಹಾಗಾಗಿ ಪರಿಸರ ಸ್ನೇಹಿ ವಾಹನಗಳಾಗಿರುವುದರಿಂದ ಜನಪ್ರಿಯವಾಗುವ ಕಾಲ ಬಹಳ ದೂರವಿಲ್ಲ. ಹೀರೋ ಎಲೆಕ್ಟ್ರಿಕ್ ಕಂಪನಿಯು 2008-09ರಲ್ಲಿ 70000 ಎಲೆಕ್ಟ್ರಿಕ್ ಬೈಕ್‌ಗಳನ್ನು ಮಾರಾಟ ಮಾಡುವ ಉದ್ದೇಶವನ್ನಿಟ್ಟುಕೊಂಡಿದೆ. 2007-08ರಲ್ಲಿ 21000 ಎಲೆಕ್ಟ್ರಿಕ್ ಬೈಕ್‌ಗಳನ್ನು ಮಾರಾಟ ಮಾಡಿತ್ತು. ಈ ವರ್ಷ ಎಲೆಕ್ಟ್ರಿಕ್ ಬೈಕ್‌ಗಳನ್ನು ಮಾರುಕಟ್ಟೆಯು ಶೇ. 150ರಷ್ಟು ಬೆಳವಣಿಗೆಯನ್ನು ಕಾಣಲಿದೆ. ಆದ್ದರಿಂದ 1.7 ಲಕ್ಷದಿಂದ 1.8 ಲಕ್ಷದವರೆಗೆ ಎಲೆಕ್ಟ್ರಿಕ್ ಬೈಕ್‌ಗಳು ಮಾರಾಟವಾಗುವ ನಿರೀಕ್ಷೆ ಇದೆ. ಟಿವಿಎಸ್ - ಕೈನೆಟಿಕ್ - ಹೀರೋ ಕಂಪನಿಗಳಲ್ಲಿ ಪೈಪೋಟಿ ಆರಂಭವಾಗಿದೆ. ದೆಹಲಿಯ ಲೋಹಿಯಾ ಕಂಪನಿಯು ಈಗತಾನೇ ಪ್ರವೇಶಿಸಿದೆ. ಅದು ಉತ್ತರ ಖಂಡದಲ್ಲಿ 150 ಕೋಟಿ ರೂಪಾಯಿ ಖರ್ಚು ಮಾಡಿ ಕಾರ್ಖಾನೆಯನ್ನು ಕಟ್ಟಿದೆ. ಪ್ರತಿ ವರ್ಷವೂ 2 ಲಕ್ಷ ಸ್ಕೂಟರ್ಸ್ ಅನ್ನು, 2 ಲಕ್ಷ ತ್ರಿಚಕ್ರ ವಾಹನಗಳನ್ನು ತಯಾರಿಸುವ ಗುರಿ ಹೊಂದಿದೆ. ಹೀರೋ ಕಂಪನಿಯು ಲೂಧಿಯಾನದಲ್ಲಿ ತನ್ನ ಉತ್ಪಾದನಾ ಸಾಮರ್ಥ್ಯವನ್ನು ದ್ವಿಗುಣಗೊಳಿಸಿದೆ. ಈಗ ಅದು 1.25 ಲಕ್ಷ ವಾಹನಗಳನ್ನು ತಯಾರಿಸುತ್ತಿದೆ. ಅಲ್ಲದೆ 120ರಷ್ಟು ಇರುವ ವಿತರಕರ ಸಂಖ್ಯೆಯನ್ನು 300ಕ್ಕೆ ಹೆಚ್ಚಿಸುತ್ತಿದೆ.





ವಿದ್ಯಾರ್ಥಿಗಳು, ಗೃಹಿಣಿಯರು, ಹಿರಿಯ ನಾಗರೀಕರು, ಸಣ್ಣ ವರ್ತಕರು ಎಲೆಕ್ಟ್ರಿಕ್ ಬೈಕ್‌ಗಳ ಗ್ರಾಹಕರಾಗಿದ್ದಾರೆ. ಎಲೆಕ್ಟ್ರಿಕ್ ಬೈಕ್‌ಗಳಲ್ಲಿ ಅನೇಕ ಮಾದರಿಗಳು 250 ವ್ಯಾಟ್ಸ್ ಸಾಮರ್ಥ್ಯವನ್ನು ಹೊಂದಿದೆ. ಆದ್ದರಿಂದ ಅವುಗಳಿಗೆ ಡ್ರೈವಿಂಗ್ ಲೈಸೆನ್ಸ್, ರಿಜಿಸ್ಟ್ರೇಷನ್, ರೋಡ್ ಟ್ಯಾಕ್ಸ್ ಪಾವತಿಯ ಅಗತ್ಯವಿಲ್ಲದಿರುವುದರಿಂದ ಗ್ರಾಹಕರನ್ನು ಸೆಳೆಯುವುದರಲ್ಲಿ ಸಂಶಯವೇ ಇಲ್ಲ. ನವೀಕರಿಸಬಹುದಾದ ಇಂಧನಗಳ ಅಭಿವೃದ್ಧಿ ಕಾರ್ಯಕ್ರಮದ ಪ್ರಕಾರದ ವಿಧಾನಗಳನ್ನು ಆಧಾರವಾಗಿಟ್ಟುಕೊಂಡು, ದೆಹಲಿ, ಚತ್ತೀಸ್‌ಘಡ, ಬಂಗಾಳ ಸರ್ಕಾರಗಳು ಎಲೆಕ್ಟ್ರಿಕ್ ಬೈಕ್‌ಗಳಿಗೆ ಶೇ. 15 - 30 ಸಹಾಯ ಧನವನ್ನು ಪ್ರಕಟಿಸಿವೆ. ಇದರಿಂದಾಗಿ ಕಂಪನಿಗಳು ತಮ್ಮ ವಾಹನಗಳ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಬೆಲೆ ಇಳಿಸುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿವೆ. ಆಂಧ್ರ ಹಾಗೂ ಕರ್ನಾಟಕದಲ್ಲಿ ವ್ಯಾಟ್ ಅನ್ನು ಶೇ. 12.5ರಿಂದ ಶೇ. 4ಕ್ಕೆ ಇಳಿಸಿರುವುದರಿಂದ 500 ವ್ಯಾಟ್ ಸಾಮರ್ಥ್ಯದ ಎಲೆಕ್ಟ್ರಿಕ್ ಬೈಕ್‌ಗಳಿಗೆ 350000 ರೂಪಾಯಿನಿಂದ 30000 ರೂಪಾಯಿ ಬೆಲೆ ಕಡಿಮೆಯಾಗುವ ನಿರೀಕ್ಷೆ ಇದೆ. ಬೇಡಿಕೆ ಹೆಚ್ಚಾದಷ್ಟು ಬೆಲೆ ಇನ್ನೂ ಕಡಿಮೆಯಾಗುವ ನಿರೀಕ್ಷೆ ಇದೆ. ವಾಹನಗಳು ಪೆಟ್ರೋಲ್‌ನಿಂದ ಓಡುವ ಬದಲು ವಿದ್ಯುತ್‌ನಿಂದ ಓಡಲಿದೆ. ಮೈಲೇಜ್ ನಿರೀಕ್ಷೆಯ ಮಟ್ಟದಲ್ಲಿಲ್ಲದೆ ಇದ್ದರೂ ಅದಕ್ಕೆ ಜನ ಗಮನ ಕೊಟ್ಟಿಲ್ಲ. ಸ್ವಲ್ಪ ವರ್ಷಗಳ ನಂತರ ಮೈಲೇಜ್ ಹೆಚ್ಚಿಸುವುದಕ್ಕೆ ಸಂಬಂಧಪಟ್ಟಂತೆ ಸಂಶೋಧನೆಗಳು ನಡೆಯಲಿವೆ. ಈಗ ವಿದ್ಯುತ್‌ಗಾಗಿ ಅಂದರೆ ಬ್ಯಾಟರಿಗಳಿಗಾಗಿ ಹುಡುಕಾಟ ಆರಂಭವಾಗಿದೆ.

**ಹರಕೆ : ದೇವರಿಗೂ ಮೋಸ ! (29 ಮೇ 08 : ಯುಎನ್ಐ) ವೇಲಾಂಕಣಿ :** ಸಂಕಷ್ಟಗಳು ಬಂದಾಗ ಜನ ಅದರಿಂದ ಪಾರಾಗಲು ಹುಡುಕುವ ದಾರಿಗಳು ಹಲವಾರು. ಅವುಗಳಲ್ಲಿ ಹರಕೆ ಪದ್ಧತಿಯೂ ಒಂದು. ‘‘ನಂಬುವವರಿಗೆ ದೈವ, ನಂಬದವರಿಗೆ ಕಲ್ಲು’’ ಎನ್ನುವ ಮಾತು ನಿಜವಾದರೂ ಜನ ತರ್ಕಗಳನ್ನು ಮೀರಿ ವರ್ತಿಸುತ್ತಾರೆ ಎನ್ನುವ ಮಾತೂ ಸುಳ್ಳಲ್ಲ. ತನಗೆ, ತನ್ನ ಮನೆಯವರಿಗೆ ಬಂದ ಕಷ್ಟಗಳಿಂದ ಪಾರಾಗಲು ಮಹಿಳೆಯರು ತಮ್ಮ ಮಾಂಗಲ್ಯವನ್ನು ಗೋಲಕಕ್ಕೆ ಹಾಕುವ ತೀರ್ಮಾನ ಮಾಡುವುದಂತೂ ಭಾವಾವೇಶವೆಂದೇ ಹೇಳಬಹುದು. ಮಾಂಗಲ್ಯವನ್ನು ಗೋಲಕಕ್ಕೆ ಹಾಕಿಬಿಟ್ಟರೆ ಅಪಶಕುನವೆಂದೇ ಭಾವಿಸುತ್ತಾರೆ. ಹಾಗಾಗಿ ಗೋಲಕಕ್ಕೆ ಹಾಕಲೆಂದೇ ಇನ್ನೊಂದು ತಾಳಿ ಮಾಡಿಸುತ್ತಾರೆ. ಹೀಗಾಗಿ ಚಿನ್ನದ ಅಂಗಡಿಯವರಿಗೆ ಭರ್ಜರಿ ವ್ಯಾಪಾರ. ಹಾಗಾಗಿ ಮೋಸ ಮಾಡುವ ಅವಕಾಶಗಳೂ ಅಪಾರ ! ಹೇಗಿದ್ದರೂ ಈ ಮಾಂಗಲ್ಯಗಳು ನೇರವಾಗಿ ಗೋಲಕಕ್ಕೆ ಹೋಗುವುದರಿಂದ ಮೋಸ ಮಾಡಿದರೂ ಗೊತ್ತಾಗುವುದಿಲ್ಲ. ಆದ್ದರಿಂದ ಮಾಂಗಲ್ಯಗಳನ್ನು

ಹಿತ್ತಾಳೆಯಲ್ಲಿಯೋ, ತಾಮ್ರದಲ್ಲಿಯೋ ಮಾಡಿ ಚಿನ್ನದ ಪಾಲಿಶ್ ಮಾಡಿ ಹೆಂಗಸರಿಗೆ ಕೊಡುತ್ತಾರೆ. ಆದರೆ ಚಿನ್ನದ ರೇಟಿನ ಹಣವನ್ನು ವಸೂಲು ಮಾಡುವುದನ್ನು ಮರೆಯುವುದಿಲ್ಲ. ಮುಜರಾಯಿ ಇಲಾಖೆಯು ದೇವಸ್ಥಾನದ ಅಗತ್ಯ ಖರ್ಚುಗಳಿಗಿಂತ ಹೆಚ್ಚು ಹಣ ಗೋಲಕಗಳಲ್ಲಿ ಇದ್ದರೆ, (ಆಭರಣಗಳು ಇದ್ದರೆ, ಅದನ್ನು ಮಾರಿ) ಸರ್ಕಾರಕ್ಕೆ ಕೊಡಬೇಕೆಂಬ ಆದೇಶ ಹೊರಡಿಸಿದೆ. ಆ ಹಣದಿಂದ ಶಾಲೆಗೆ ಹೋಗುವ ಮಕ್ಕಳಿಗೆ ಊಟದ ಖರ್ಚಿಗಾಗಿ ಇದನ್ನು ಬಳಸುವುದು ಸರ್ಕಾರದ ಉದ್ದೇಶ. ಆದರೆ ಈ ಆಭರಣಗಳನ್ನು ಚಿನ್ನದ ವ್ಯಾಪಾರಿಗಳು (ಅವುಗಳನ್ನು ಅವರೇ ಮಾಡಿರುವುದರಿಂದ) ತೆಗೆದುಕೊಳ್ಳುವುದಿಲ್ಲ. ಜನ ಬೇರೆಕಡೆ ಮಾಡಿಸಿ ಹರಕೆ ತೀರಿಸಿಕೊಳ್ಳಬೇಕೆಂದು ದೇವಸ್ಥಾನದ ಆಡಳಿತ ಮಂಡಲಿಯವರು ಮನವಿ ಮಾಡುತ್ತಿದ್ದಾರೆ. ಆದರೆ ತುಂಬಾ ದೂರ ಹೋಗಲು ಜನ ಒಪ್ಪುತ್ತಿಲ್ಲ. ಸರ್ಕಾರಕ್ಕೆ ಅನ್ಯಾಯವಾಗುತ್ತಿರುವುದು ನಿಂತಿಲ್ಲ. ಪಾಪ – ಪುಣ್ಯ ಎಲ್ಲಾ ಅವರವರಿಗೆ ಬಿಟ್ಟಿದ್ದು ಎಂದು ಭಕ್ತರು ಹೇಳುತ್ತಾರೆ.

**ಸಮವಸ್ತ್ರ: ಪೋಷಕರಿಗೆ ಅಸ್ತ್ರ! (30 ಮೇ 08 : ಪಿಟಿಐ) ಬೆಂಗಳೂರು :** ಶಾಲಾ ವಿದ್ಯಾರ್ಥಿಗಳು ಯೂನಿಫಾರಂ ಹಾಕಿಕೊಂಡು ಬರಲು ಶಾಲೆಗಳಲ್ಲಿ ನಿಯಮವಿದೆ. ವಿದ್ಯಾರ್ಥಿಗಳ ಸಾಮಾಜಿಕ – ಆರ್ಥಿಕ ಮಟ್ಟ ಹೇಗೇ ಇದ್ದರೂ ಶಾಲೆಗೆ ಬಂದಮೇಲೆ ಎಲ್ಲರೂ ಒಂದೆ ಎನ್ನುವ ಭಾವನೆ ಮೂಡಿಸಿ ಅವರಲ್ಲಿ ಒಗ್ಗಟ್ಟು ಮೂಡಿಸಬೇಕೆನ್ನುವುದು ಅದರ ಉದ್ದೇಶ. ಆದರೆ ಇಲ್ಲಿಯೂ ಪೋಷಕರಿಗೆ ಮೋಸ ಮಾಡಬೇಕೆನ್ನುವ ಉದ್ದೇಶವಿರುವುದರಿಂದ ಮೂಲ ಉದ್ದೇಶವೇ ಮಾಯವಾಗಿದೆ. ಅಲ್ಲಿಯೂ ಶಾಲೆಯ ಆಡಳಿತ ಮಂಡಲಿ ಹೇಳುವ ಅಂಗಡಿಯಲ್ಲಿಯೇ ಬಟ್ಟೆ ಖರೀದಿಸಿ, ಅಲ್ಲಿರುವ ಟೈಲರ್‌ಗೇ ಹೊಲಿಯಲು ಹಾಕಬೇಕೆಂದು ಒತ್ತಾಯವಿರುತ್ತದೆ. ಆದರೆ ಯೂನಿಫಾರಂ ಬಾಳಿಕೆ ಬಂದರೆ ಅದು ಪೋಷಕರ ಪುಣ್ಯ ! ಒಂದೇ ತಿಂಗಳಲ್ಲಿ ಕೊಳೆಯ ಜೊತೆ ಬಣ್ಣವೂ ಹೋಗಿರುತ್ತದೆ. ಮಕ್ಕಳ ಪ್ರೋಗ್ರೆಸ್ ಕಾರ್ಡ್ ನೋಡಬೇಕಾದ ಜೊತೆಗೆ ಬಟ್ಟೆಗಳನ್ನೂ ನೋಡಬೇಕಾಗುತ್ತದೆ. ಬಟ್ಟೆಗೆ ಕೊಟ್ಟ ದುಡ್ಡು , ಟೈಲರ್‌ಗೆ ಕೊಟ್ಟ ದುಡ್ಡು ಎರಡೂ ದಂಡ. ಇದರ ಜೊತೆಗೆ ಹೆಡ್ ಮೇಡಂ ಜೊತೆ ಜಗಳ. ಹೇಗಾದರೂ ದುಡ್ಡು ಮಾಡಬೇಕು ಎನ್ನುವುದೊಂದೇ ಇದರ ಉದ್ದೇಶ. ಯಾರಿಗೆ ನಷ್ಟವಾದರೂ ಪರವಾಗಿಲ್ಲ ಎನ್ನುವ ಧೋರಣೆ.

**ಬರಲಿದೆ ಕೊಳೆಯುವ ಪ್ಲಾಸ್ಟಿಕ್ : (31 ಮೇ 08 : ಪಿಟಿಐ) ನವದೆಹಲಿ :** ಪೀಠೋಪಕರಣಗಳಿಂದ ಪೊಟ್ಟಣ ಕಟ್ಟುವವರೆಗೆ ಪ್ಲಾಸ್ಟಿಕ್ ಬೇಕೇಬೇಕು. ಆದರೆ ಮುರಿದುಹೋದ/ಹರಿದುಹೋದ ಪ್ಲಾಸ್ಟಿಕ್ ನೆಲಕ್ಕೆ ಬಿದ್ದನಂತರ 1000 ವರ್ಷಗಳವರೆಗೆ





ಕೊಳೆಯುವುದೇ ಇಲ್ಲ. ಇವುಗಳನ್ನು ಗಮನಿಸಿದ ಮೈಸೂರಿನ ರಕ್ಷಣಾ ಆಹಾರ ಸಂಶೋಧನಾಲಯವು (ಡಿ.ಎಫ್.ಆರ್.ಎಲ್) ಹೊಸ ರೀತಿಯ ಪ್ಲಾಸ್ಟಿಕ್ಕನ್ನು ತಯಾರಿಸಿದೆ. ಅದು 100 ದಿನಗಳಲ್ಲಿ ಭೂಮಿಯಲ್ಲಿ ಕೊಳೆಯುತ್ತದೆ. ಅಕ್ಕಿಯ ಹೊಟ್ಟನ್ನು ಬಳಸಿ ಪ್ಲಾಸ್ಟಿಕ್ಕನ್ನು ತಯಾರಿಸಲು ಪ್ರಯತ್ನಿಸುತ್ತಿದೆ. ನೇರವಾಗಿ ಸೂರ್ಯನ ಬೆಳಕು ಬಿದ್ದಾಗ ಈ ಪ್ಲಾಸ್ಟಿಕ್ 100 ದಿನಗಳಲ್ಲಿ ಕೊಳೆಯುತ್ತವೆ. ಅತಿ ಎತ್ತರದ ಮನೆಗಳಲ್ಲಿ, ಮನೆಗಳ ಒಳಗೆ ಪ್ಲಾಸ್ಟಿಕ್ ಯಾವರೀತಿ ಕೊಳೆಯುತ್ತದೆ ಎನ್ನುವುದನ್ನು ನೋಡಬೇಕಾಗಿದೆ. ಅತಿ ಎತ್ತರ ಪ್ರದೇಶಗಳಲ್ಲಿ ಬ್ಯಾಕ್ಟೀರಿಯಾಗಳು ಕಡಿಮೆ ಇರುತ್ತವೆ. ಆದುದರಿಂದ ಕೊಳೆಯುವಿಕೆ ನಿಧಾನವಾಗುತ್ತದೆ. ಆದರೆ ಸೂರ್ಯನ ಕಿರಣಗಳು ಪ್ರಕಾಶಮಾನವಾಗಿರುತ್ತದೆ. ಅಂತಹ ಪ್ರದೇಶಗಳಲ್ಲಿ ಈ ಪ್ಲಾಸ್ಟಿಕ್ ಕೊಳೆಯುತ್ತದೆ. ಸಧ್ಯಕ್ಕೆ ಅವುಗಳನ್ನು ಆಹಾರಗಳ ಪ್ಯಾಕೆಟ್‌ಗೆ ಬಳಸಲಾಗುತ್ತದೆ. ನೆಲಕ್ಕೆ ಬಿದ್ದ ಆರು ತಿಂಗಳ ನಂತರ ಏನಾಗುತ್ತದೆ, ಶೀತ ಪ್ರದೇಶಗಳಲ್ಲಿ – ಉಷ್ಣ ಪ್ರದೇಶಗಳಲ್ಲಿ ಯಾವರೀತಿ ಕೊಳೆಯುತ್ತದೆ ಎನ್ನುವುದನ್ನು ನೋಡಿಕೊಂಡು ಸಾರ್ವಜನಿಕರ ಬಳಕೆಗೆ ಉಪಯೋಗಿಸಲು ಬಿಡಲಾಗುವುದು.

– ಬಿ.ಎಸ್. ಸತೀಶ್

## ಶ್ರದ್ಧಾಂಜಲಿ

| | |
|---|---|
| 16.05.08 | **ಹೆಚ್. ಎಸ್. ಶ್ರೀನಿವಾಸ ಶಾಸ್ತ್ರಿ (ಅಣ್ಣಪ್ಪ), 80 ವರ್ಷ,** |
| ಬೆಂಗಳೂರು | **ವಾಧೂಲಸ ಗೋತ್ರ** |
| 22.05.08 | **ಹೆಚ್. ಎನ್. ರಾಮನಾಥನ್ (ರಮೇಶ) 67 ವರ್ಷ,** |
| ಬೆಂಗಳೂರು | **ಕೌಶಿಕ ಗೋತ್ರ** |
| 22.05.08 | **ಎಸ್. ಎನ್. ಸುಬ್ಬರಾವ್, 72 ವರ್ಷ, ಸಂಕೃತಿ ಗೋತ್ರ** |
| ಯುಎಸ್‌ಎ | (ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿದ್ದರು) |
| 06.06.08 | **ಕಮಲ, 77 ವರ್ಷ, ಕೌಶಿಕ ಗೋತ್ರ** |
| ಬೆಂಗಳೂರು | (ದಿ|| ಕೇಣಿ ನಾರಾಯಣಸ್ವಾಮಿ ಅವರ ಧರ್ಮ ಪತ್ನಿ) |

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

## ಸನ್ಮಾನ

ದಿನಾಂಕ 26.05.2008ರಂದು ಮೈಸೂರಿನಲ್ಲಿ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 66ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ದತ್ತಾತ್ರೇಯ ಅವಧೂತ ಪೀಠದಲ್ಲಿ ನಡೆದ ಸಮಾರಂಭದಲ್ಲಿ ನಮ್ಮ ಬಂಧುಗಳಾದ ವಿದ್ವಾನ್ ಆರ್. ಕೆ. ಪದ್ಮನಾಭ ಅವರಿಗೆ ''ರಾಗ ಪ್ರಯೋಗ ಚಕ್ರವರ್ತಿ'' ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು. ಹಾಗೆಯೇ ಶ್ರೀಯುತರಾದ ಡಾ|| ಮತ್ತೂರು ಕೃಷ್ಣಮೂರ್ತಿ ಮತ್ತು ಹೊಸಹಳ್ಳಿ ಕೇಶವಮೂರ್ತಿ ಅವರುಗಳನ್ನು ''ಆಸ್ಥಾನ ವಿದ್ವಾಂಸರು'' ಎಂದು ಘೋಷಿಸಲಾಯಿತು.

ಇವರೆಲ್ಲರಿಗೂ ಸಂಘದ ಅಭಿನಂದನೆಗಳು.

## ಬದಲಾದ ವಿಳಾಸಗಳ ಪಟ್ಟಿ ಲಭ್ಯ

15.01.2008 ರವರೆಗೆ ಪರಿಷ್ಕರಿಸಿದ ಬದಲಾದ ವಿಳಾಸ ಪಟ್ಟಿ ಮುದ್ರಿಕೆಯಾಗಿ ಲಭ್ಯವಾಗಿರುತ್ತದೆ. ಇದನ್ನು ಮೈಸೂರು ಕಛೇರಿ ಮತ್ತು ಬೆಂಗಳೂರು ಕಛೇರಿಗಳಲ್ಲಿ ಪಡೆಯಬಹುದು. ಇದರ ಬೆಲೆ ರೂ. 15/- ಮಾತ್ರ. ಇಡೀ ಪುಸ್ತಕದ ಬೆಲೆ ರೂ. 50/- ಮಾತ್ರ.





*With Best Compliments From :*

**Smt. Geetha Krishna**
**Periyapatna**

***Contact for SBI Life Insurance and Postal R.D. Agent***

**No. 114, Sri Ganesha Krupa, Vala Kote, Periyapatna, Mysore District - 571 107**
**Ph : 08223 - 274949, (M) : 9448602038**

ಬೆಟ್ಟದಪುರದ ದಿ|| ಶ್ರೀ ಬಿ. ಕೆ. ಸುಬ್ರಹ್ಮಣ್ಯರವರ ಧರ್ಮಪತ್ನಿ
ಶ್ರೀಮತಿ ಜಯಲಕ್ಷಮ್ಮನವರ ಕುಟುಂಬ

### ಸಂಪರ್ಕಿಸಿ :

ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.

**(P. G. Accommodation Available)**

**ದೂ : 9242803829, 9341413319**